ಓ ಎಸ್ .ನಂ.**70/2015**

**ಪಿಡಬ್ಲ್ಯು – 1**

ದಿನಾಂಕ **12-08-2025** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದ**

1. ನಾನು ಶಾಲೆಯನ್ನು ಕಲಿತಿಲ್ಲ. ನನ್ನ ಮದುವೆ ಆಗಿ ಎಷ್ಟು ವರ್ಷ ಆಯಿತು ಎಂದು ನನಗೆ ನೆನಪಿಲ್ಲ. ನನ್ನ ಮದುವೆ ಆದಾಗಿನಿಂದ ನಾನು ನನ್ನ ಗಂಡನ ಮನೆಯಲ್ಲಿ ವಾಸವಿರುತ್ತೇನೆ. ನನ್ನ ಅಜ್ಜ ಕುತುಬಸಾಬ್ ನಿಗೆ ಮೂರು ಜನ ಗಂಡು ಮಕ್ಕಳು ಹಾಗೂ ಆರು ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ತಂದೆ, ಪ್ರತಿವಾದಿ ನಂ.1,2 ರವರು ನನ್ನ ಅಜ್ಜನಿಗೆ ಗಂಡು ಮಕ್ಕಳು ಎಂದರೆ ಸರಿ. ದಾವಾ ಆಸ್ತಿಗಳು ನನ್ನ ಅಜ್ಜನಿಂದ ಬಂದ ಆಸ್ತಿಗಳು ಎಂದರೆ ಸರಿ. ನನ್ನ 6 ಜನ ಅತ್ತೆಯಂದಿರನ್ನು ಈ ದಾವೆಗೆ ನಾನು ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ಅತ್ತೆಯಂದಿರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಲು ನನಗೆ ಏನೂ ತೊಂದರೆ ಇರುವುದಿಲ್ಲ. ದಾವೆಯಲ್ಲಿ ನನ್ನ ಅತ್ತೆಯಂದಿರಿಗೂ ಸಹ ಹಿಸ್ಸೆ ಇರುತ್ತದೆ ಎಂದರೆ ಸರಿ.

2. ದಾವಾ ಆಸ್ತಿಯನ್ನು ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಸರ್ವೇ ನಂ.129 ವಿಸ್ತೀರ್ಣ 1 ಎಕರೆ 15 ಗುಂಟೆ, ಸರ್ವೇ ನಂ.665 ವಿಸ್ತೀರ್ಣ 36 ಗುಂಟೆ, ಸರ್ವೇ ನಂ.666 ವಿಸ್ತೀರ್ಣ 14 ಗುಂಟೆ ನಮ್ಮ ಕುಟುಂಬಕ್ಕೆ ಆಸ್ತಿಗಳು ಇರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನನಗೆ ಮಾಹಿತಿ ಇಲ್ಲದ ಕಾರಣ ನಾನು ಸದರಿ ಆಸ್ತಿಗಳನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ. ಈ ಆಸ್ತಿಗಳನ್ನು ಹೊರತು ಪಡಿಸಿ ನಮ್ಮ ಮನೆಯ ಆಸ್ತಿಗಳು ಇರುತ್ತವೆ ಎಂದರೆ ಸರಿ. ನನ್ನ ಹೆಸರಿಗೆ ಆಸ್ತಿ ನಂ.278/1 ಇರುತ್ತದೆ ಎಂದರೆ ಸರಿ. ಕೋಟೂರು ಪಂಚಾಯಿತಿ ಹದ್ದಿಯಲ್ಲಿ ಪ್ರತಿವಾದಿ ನಂ.8 ಆದ ಜಪ್ರುಲ್ಲಾ ಹೆಸರಿನಲ್ಲಿ ಪಂಚಾಯಿತಿ ಆಸ್ತಿ ನಂ. 271 ಇರುತ್ತದೆ ಎಂದರೆ ಸರಿ. ಪ್ರತಿವಾದಿ ನಂ.8 ಆದ ಜಪ್ರುಲ್ಲಾ ಹೆಸರಿನಲ್ಲಿ ಪಂಚಾಯಿತಿ ಆಸ್ತಿ ನಂ.273 ಇರುತ್ತದೆ ಎಂದರೆ ಸರಿ. ಪ್ರತಿವಾದಿ ನಂ.8 ಆದ ಜಪ್ರುಲ್ಲಾ ಹೆಸರಿನಲ್ಲಿ ಪಂಚಾಯಿತಿ ಆಸ್ತಿ ನಂ.426 ಇರುತ್ತದೆ ಎಂದರೆ ಸರಿ.

ಕೋಟೂರು ಪಂಚಾಯಿತಿ ಹದ್ದಿಯಲ್ಲಿ ಪ್ರತಿವಾದಿ ನಂ.3 ಮತ್ತು ಅವರ ಮಕ್ಕಳ ಹೆಸರಿನಲ್ಲಿ ಆಸ್ತಿ ನಂ.257/1 ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಸಹ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಇದ್ದು, ಇವಗಳನ್ನು ಯಾಕೆ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಅವರೇ ಅವುಗಳನ್ನು ಹಿಡಿದಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಆಸ್ತಿಗಳನ್ನು ಅವರೇ ಹಿಡಿದಿರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿಲ್ಲ.

3. ದಾವಾ ಆಸ್ತಿಗಳ ಚೆಕಬಂದಿಗಳನ್ನು ಹೇಳಲು ನನಗೆ ಬರುವುದಿಲ್ಲ. ದಾವಾ ಆಸ್ತಿಗಳಲ್ಲಿ ಸರ್ವೇ ನಂ.699/ಪಿ 1 ಆಸ್ತಿಯು ಪ್ರತಿವಾದಿ ನಂ.1 ಮತ್ತು 2 ರವರಿಗೆ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಸರ್ವೇ ನಂ.117 ಆಸ್ತಿಯು ನನ್ನ ತಂದೆಯ ಹಿಸ್ಸೆಗೆ ಬಂದಿದೆ ಎಂದರೆ ಸಾಕ್ಷಿಯು ಈಗ ಆಸ್ತಿ ಇರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ಮಾರಾಟ ಮಾಡಿ ಅದನ್ನು ಹಂಚಿಕೊಂಡಿದ್ದಾರೆ, ಅದು ನಮ್ಮ ಅಣ್ಣ ತಮ್ಮಂದಿರಿಗೆ ಇರುವುದಿಲ್ಲ. ಸದರಿ ಆಸ್ತಿಯನ್ನು ಬೇರೆ ಬೇರೆಯವರು ಖರೀದಿ ಮಾಡಿರುತ್ತಾರೆ, ಈಗ ಅದು ನಮ್ಮ ಕುಟುಂಬಕ್ಕೆ ಇರುವುದಿಲ್ಲ. ಸದರಿ ಆಸ್ತಿ ಖರೀದಿ ಮಾಡಿದವರನ್ನು ಈ ದಾವೆಯಲ್ಲಿ ನಾನು ಸೇರಿಸಿಲ್ಲ. ನನಗೆ ಗೊತ್ತಾಗದೇ ಇದ್ದಿದ್ದರಿಂದ ಸದರಿ ವ್ಯಕ್ತಿಗಳನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ.

4. ಪ್ರತಿವಾದಿ ನಂ.1 ಮತ್ತು 2 ಹಾಗೂ ನನ್ನ ತಂದೆ ಯವರು 2011 ರಲ್ಲಿ ಒಂದು ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂದು ನಾನು ಬರೆದುಕೊಂಡಿಲ್ಲ. 2011 ರಲ್ಲಿ ನಾನು ಯಾವುದಾದರೂ ನ್ಯಾಯಾಲಯದಲ್ಲಿ ಅಥವಾ ಎ ಸಿ ಕಚೇರಿ ಅಥವಾ ಡಿ ಸಿ ಕಚೇರಿಯಲ್ಲಿ ಅದನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ. ಹಿಸ್ಸೆ ಆಗಿರುವುದನ್ನು ನಾನು ಪ್ರಶ್ನೆ ಮಾಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ನನ್ನ ತಂದೆಯ ಆಸ್ತಿಯಲ್ಲಿ ನನಗೆ ಹಕ್ಕು ಬರಬೇಕು ಎಂದು ಈ ದಾವೆಯನ್ನು ಸಲ್ಲಿಸಿರುತ್ತೇನೆ.

5. ನನ್ನ ತಂದೆಗೆ ನಾವು 5 ಜನ ಮಕ್ಕಳು, 2 ಜನ ಗಂಡು ಮಕ್ಕಳು, ಹಾಗೂ 3 ಜನ ಹೆಣ್ಣು ಮಕ್ಕಳು ಇರುತ್ತಾರೆ. ಅದರಲ್ಲಿ ವಾದಿಗಳು ನಾವಿಬ್ಬರು ಹಾಗೂ 9 ನೇ ಪ್ರತಿವಾದಿ ನನ್ನ ತಂಗಿ ಹಾಗೂ 8 ನೇ ಪ್ರತಿವಾದಿ ನನ್ನ ತಮ್ಮ, ನನ್ನ ಮತ್ತೊಬ್ಬ ತಮ್ಮ ಜೈಲಾನಿ ತೀರಿಕೊಂಡಿರುತ್ತಾನೆ, ಆತನ ಹೆಂಡತಿ 3 ನೇ ಪ್ರತಿವಾದಿ ಹಾಗೂ ಆತನ ಮಕ್ಕಳು 4 ರಿಂದ 7 ನೇ ಪ್ರತಿವಾದಿಗಳು ಇರುತ್ತಾರೆ. ನನ್ನ ತಂದೆಗೆ ಬಂದ ಹಿಸ್ಸೆಯನ್ನು 3 ಮತ್ತು 8 ನೇ ಪ್ರತಿವಾದಿಯರು ಸಾಗುವಳಿ ಮಾಡುತ್ತಿದ್ದಾರೆ ಎಂದರೆಸರಿ . ಅದರಲ್ಲಿ ನನಗೆ ಭಾಗ ಬೇಕು ಎಂದು ಹೇಳುತ್ತಾರೆ. ನನ್ನದು ಪ್ರತಿವಾದಿ ನಂ.1 ಮತ್ತು 2 ರವರ ಜೊತೆಗೆ ಯಾವುದೇ ಜಗಳ ಇರುವುದಿಲ್ಲ.

6. ನಾನು ಹಾಗೂ ನನ್ನ ತಾಯಿ ಹಾಗೂ ನನ್ನ ಸಹೋದರಿಯರು ನಮಗೆ ಯಾವುದೇ ಹಿಸ್ಸೆ ಬೇಡ ಎಂದು ದಿಃ02-03-1994 ರಂದು ಕಂದಾಯ ಇಲಾಖೆಗೆ ಅರ್ಜಿ ಕೊಟ್ಟಿದ್ದರಿಂದ ಅದು ಜೈಲಾನಿ ಹಾಗೂ ಪ್ರತಿವಾದಿ ನಂ. 8 ರವರ ಹೆಸರಿಗೆ ಸರ್ವೇ ನಂ.117 ದಾಖಾಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾವು ಅರ್ಜಿ ಕೊಟ್ಟು ನಮ್ಮ ಹಿಸ್ಸೆಯನ್ನು ಜೈಲಾನಿ ಹಾಗೂ ಪ್ರತಿವಾದಿ ನಂ. 8 ರವರ ಹೆಸರಿಗೆ ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

7. ದಿಃ28-06-2011 ರಂದು ಆದ ಹಿಸ್ಸೆ ಪ್ರಕಾರ ಗಂಡು ಮಕ್ಕಳ ಹೆಸರು ಅಷ್ಟೆ ಹಚ್ಚಿರಿ ಎಂದು ನನ್ನ ಅತ್ತೆಯಂದಿರು ವರದಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮದುವೆಯ ಕಾಲಕ್ಕೆ ನಮಗೆ ಏನು ಕೊಡಬೇಕು ನಮ್ಮ ಹಿಸ್ಸೆ ಪ್ರಕಾರ ನಮಗೆ ಹಣ ಮತ್ತು ಬಂಗಾರವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಬರುವ ಹಿಸ್ಸೆಯ ಆಸ್ತಿಗೆ ಮಾತ್ರ ನಾವು ಹಕ್ಕುದಾರರು ಎಂದರೆ ಸರಿ. ಪ್ರತಿವಾದಿ ನಂ.1 ಮತ್ತು 2 ರವರ ಹಿಸ್ಸೆಗೆ ಬಂದಂತ ಆಸ್ತಿಗೆ ನಾವು ಹಕ್ಕುದಾರರು ಅಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಯ ಆಸ್ತಿಗೆ ಮಾತ್ರ ನಾವು ಹಕ್ಕುದಾರರು ಎಂದು ಹೇಳುತ್ತಾರೆ. ಪ್ರತಿವಾದಿ ನಂ.1 ಮತ್ತು 2 ರವರನ್ನು ಪಕ್ಷಗಾರರನ್ನಾಗಿ ಮಾಡುವ ಅವಶ್ಯಕತೆ ಇರಲಿಲ್ಲ, ಅವರಿಗೆ ತೊಂದರೆ ಕೊಡಲು ನಾನು ಅವರ ವಿರುದ್ಧ ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.